**<u>ದಿನಾಂಕಃ 01-07-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 4 ಪರ ಶ್ರೀ. ಎನ್.ಆರ್. ವಕೀಲರಿಂದಃ</u>**

ನಾನು ಡಿಪ್ಲೋಮಾ ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ದಾವಾ ಐಟಂ ನಂ.1 ಸರ್ವೆ ನಂಬರ 16/2 ದಾವಾ ಐಟಂ ನಂ.2, 16/3 ಆಗಿರುತ್ತವೆ. ಸರ್ವೆ ನಂ.16/2 ರ ಮೂಲ ವಿಸ್ತೀರ್ಣ 5 ಎಕರೆ 2 ಗುಂಟೆ ಆಗಿರುತ್ತದೆ. ದಾವಾ ಐಟಂ ನಂ.1 ಪಹಣಿ ಪತ್ರಿಕೆ ಈಗ ರಾಧಮ್ಮಳ ಹೆಸರಿಗೆ ಇರುತ್ತದೆ. 1 ಎಕರೆ 9 ಗುಂಟೆ ಅದೇ ಸರ್ವೆ ನಂಬರನಲ್ಲಿ ವೆಂಕಟರಮಣಪ್ಪನವರ ಹೆಸರಿಗೆ ಇರುತ್ತದೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪಹಣಿ ಪತ್ರಿಕೆಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-1 ರಲ್ಲಿ ತುಳಸಿಬಾಯಿ ಮತ್ತು ಪ್ರಾಣೇಶಾಚಾರ್ಯ ಹೆಸರುಗಳು ಕಾಲಂ ನಂ.9 ರಲ್ಲಿ ಇರುತ್ತವೆ ಎಂದರೆ ಸರಿ. ನಿಪಿ-6 ಪಹಣಿ ಪತ್ರಿಕೆಯಲ್ಲಿ ಒಟ್ಟು ವಿಸ್ತೀರ್ಣ 1 ಗುಂಟೆ ಖರಾಬು ಸೇರಿ 2 ಎಕರೆ 32 ಗುಂಟೆ ಇರುತ್ತದೆ ಎಂದರೆ ಸರಿ. ವೆಂಕಟರಮಣಪ್ಪನವರಿಗೆ ಸರ್ವೆ ನಂಬರ 16/3 ರಲ್ಲಿ 2 ಎಕರೆ 32 ಗುಂಟೆ ಪೈಕಿ 1 ಎಕರೆ 16 ಗುಂಟೆ ಅವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ವೆಂಕಟರಮಣಪ್ಪನವರ ಹೆಸರಿಗೆ 1 ಎಕರೆ 16 ಗುಂಟೇ ಖಾತೆ ಮತ್ತು ಪಹಣಿ ಮ್ಯುಟೇಶನ ಮುಖಾಂತರ ಆಗಿರುತ್ತವೆ ಎಂದರೆ ಸರಿ. ಸರ್ವೆ ನಂ.16/3 ರಲ್ಲಿ 2 ಎಕರೆ 32 ಗುಂಟೆ ಪೈಕಿ 1 ಎಕರೆ 16 ಗುಂಟೆ ಪ್ರಾಣೇಶಾಚಾರ್ಯ ರವರ ಹೆಸರಿಗೆ ಇರುತ್ತವೆ ಎಂದರೆ ಸರಿ.

ವೆಂಕಟರಮಣಪ್ಪನವರ ಹೆಣ್ಣು ಮತ್ತು ಗಂಡು ಮಕ್ಕಳು ಸರ್ವೆ ನಂ.16/3 ರಲ್ಲಿರುವ ಅವರ 1 ಎಕರೆ 16 ಗುಂಟೆ ಜಮೀನು ಮತ್ತು ಇನ್ನುಳಿದ ಅವರ ಕುಟುಂಬದ ಆಸ್ತಿಗಳು ವಿಭಾಗಗಳು

ಮಾಡಿಕೊಂಡಿರುತ್ತಾರೆ ಎಂದರೆ ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ. ವೆಂಕಟರಮಣಪ್ಪನವರ 1 ಎಕರೆ 16 ಗುಂಟೆ ಜಮೀನು ಪೋಡಿ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವೆಂಕಟರಮಣಪ್ಪನವರಿಗೆ ಸರ್ವೆ ನಂ.16/3 ರಲ್ಲಿ 1 ಎಕರೆ 16 ಗುಂಟೆ ಜಮೀನು ಇರುತ್ತದೆ. ವೆಂಕಟರಮಣಪ್ಪನವರಿಗೆ ನಾವು ಈ ದಾವೆ ಸಲ್ಲಿಸುವಾಗ ಸರ್ವೆ ನಂ.16/3 ರಲ್ಲಿ ಜಮೀನು ಇತ್ತು ಈಗ ಏನಾಗಿರುತ್ತದೆ ನನಗೆ ಗೊತ್ತಿಲ್ಲ. ನಾನು ಸರ್ವೆ ನಂ.16/3 ರ ದಾಖಲೆಗಳು 2017 ರಲ್ಲಿ ನನ್ನ ತಂದೆ ತೀರಿಹೋದ ನಂತರ ನೋಡಿರುತ್ತೇನೆ. ನಾನು ಸರ್ವೆ ನಂ.16/3 ರ ಸರ್ವೇ ದಾಖಲೆಗಳು ತೋರಿಸಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಹೊಸ ಸರ್ವೆ ಸ್ಕೆಚ್ಚ ಇರುತ್ತದೆ ಎಂದು ಹೇಳುತ್ತಾರೆ. ಸದರಿ ದಾಖಲೆ ದಿಃ-12-08-2014 ರಲ್ಲಿ ತಯಾರಿಸಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಸೃಷ್ಟಿಪಡಿಸಿದ ದಾಖಲೆ ಎಂದು ಹೇಳುತ್ತಾರೆ. ಈಗ ನನಗೆ ತೋರಿಸಿದ ದಾಖಲೆಗಳು ಇದೇ ಮೊದಲ ಸಾರಿ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನಾನು ನ್ಯಾಯಾಲಯಕ್ಕೆ ಆರ್ ಟಿ ಸಿ , ಕೈ ಪಹಣಿ, ಕಂದಾಯ ಪಾವತಿ ರಶೀದಿ , ಪಟ್ಟಾ ಬುಕ್ಕ, ವೆಂಕಟರಮಣಪ್ಪ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯ ಪತ್ರ ನ್ಯಾಯಾಲಯಕ್ಕೆ ನೀಡಿರುತ್ತೇವೆ. ನ್ಯಾಯಾಲಯಕ್ಕೆ ನಾವು ಸರ್ವೆ ದಾಖಲೆ, ಟಿಪ್ಪಣಿ, ಆಕಾರಬಂದ ನಾವು ನೀಡಿರುವುದಿಲ್ಲ. ಆದರೆ ಅವು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ವೆಂಕಟರಮಣಪ್ಪನವರಿಗೆ ಸರ್ವೆ ನಂ.16/3 ರಲ್ಲಿ ನಾವು ನೋಡಿದಾಗ 1 ಎಕರೆ 16 ಗುಂಟೆ ಜಮೀನು ಇತ್ತು ಈಗ ಏನಾಗಿರುತ್ತದೆ ಎಂದು ನಾನು ತಿಳಿದುಕೊಳ್ಳಲು ಹೋಗಿರುವುದಿಲ್ಲ. ಸಾಕ್ಷಿ ಮುಂದುವರಿದು ವೆಂಕಟರಮಣಪ್ಪನವರ ಮಕ್ಕಳು ಈಗ ಸದರಿ ಜಮೀನಿನ ಸ್ವಾಧೀನದಲ್ಲಿ

ಇರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ.16/3 ರ 1 ಎಕರೆ 16 ಗುಂಟೆ ಜಮೀನಿನ ಯಾವ ಭಾಗದಲ್ಲಿ ವೆಂಕಟರಮಣಪ್ಪನ ಮಕ್ಕಳು ಸ್ವಾಧೀನದಲ್ಲಿ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿ ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಇರುತ್ತಾರೆ ಎಂದು ಹೇಳುತ್ತಾರೆ.

ವೆಂಕಟರಮಣಪ್ಪನವರ ಸರ್ವೆ ನಂ.16/3 ರ 1 ಎಕರೆ 16 ಗುಂಟೆ ಜಮೀನು ಈಗ ಫೋಡಿಯಾಗಿ ಅದು ಸರ್ವೆ ನಂಬರ 16/5 ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅವು ಸೃಷ್ಠಿ ಮಾಡಿದ ದಾಖಲೆ ಎಂದು ಹೇಳುತ್ತಾರೆ.

ಪ್ರಶ್ನೆಃ- ನಾನಾಗಲೀ ನನ್ನ ತಂದೆ ಆಗಲೀ ವೆಂಕಟರಮಣಪ್ಪನವರ ಸರ್ವೆ ನಂ.16/3 ಫೋಡಿ ಆಗಿ 16/5 ಆಗಿರುವುದು ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ?

ಉತ್ತರಃ- ಅದು ನನಗೆ ಗೊತ್ತಿಲ್ಲ.

ಪ್ರಶ್ನೆಃ- ನಿಪಿ-39 ನಾನೇ ನ್ಯಾಯಾಲಯಕ್ಕೆ ನೀಡಿರುವ ದಾಖಲೆ?

ಉತ್ತರಃ- ಅದು ಸೃಷ್ಠಿ ಮಾಡಿರುತ್ತಾರೆಂದು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ನಿಪಿ-40 ರಂತೆ ಪ್ರಾಣೇಶಾಚಾರ್ಯರಿಂದ ಕೃಷ್ಣಮೂರ್ತಿರವರಿಗೆ ಮ್ಯುಟೇಶನ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಸೃಷ್ಠಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-40 ರ ಎಂ.ಆರ್.7/2011-12 ನೀವು ಪ್ರಶ್ನೆ ಮಾಡಿದ್ದಿರಾ? ಎನ್ನುವ ಪ್ರಶ್ನೆಗೆ ಸಾಕ್ಷಿ ನಾವು 2007 ರಲ್ಲಿ ದಾವೆ ಸಲ್ಲಿಸಿರುವುದರಿಂದ ಅದನ್ನು ಪ್ರಶ್ನೇ ಮಾಡಿರುವುದಿಲ್ಲ. ನಿಪಿ-41

ಕೃಷ್ಣಮೂರ್ತಿರವರಿಂದ ಕನಕರಾಜು ರವರಿಗೆ ದಿನಾಂಕ 05-08-2015 ಕ್ರಯಪತ್ರದ ಆಧಾರದ ಮೇಲೆ ಮ್ಯುಟೇಶನ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಸೃಷ್ಠಿ ಆಗಿರುವುದರಿಂದ ನಾವು ನ್ಯಾಯಾಲಯಕ್ಕೆ ನೀಡಿರುತ್ತೇವೆ. ನಿಪಿ-41 ನೀವು ಪ್ರಶ್ನೆ ಕಂದಾಯ ಇಲಾಖೆಗೆ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾವು ದಾವೆ ಹಾಕಿರುವುದರಿಂದ ಪ್ರಶ್ನೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ 4 ನೇ ಪ್ರತಿವಾದಿಯಲ್ಲಿ ಆದ ಕ್ರಯಪತ್ರ ನಾವು ಹಾಜರುಪಡಿಸಿರುತ್ತೇವೆ. 4 ನೇ ಪ್ರತಿವಾದಿಗೆ ಕ್ರಯ ಪತ್ರ ಆಗಿರುವುದು ನನ್ನ ತಂದೆಗೆ 2015 ರಲ್ಲಿ ತಿಳಿದುಬಂದಿರುತ್ತದೆ. ನನ್ನ ತಂದೆ 2017 ರಲ್ಲಿ ತೀರಿಹೋಗಿರುತ್ತಾರೆ ಆವಾಗಿನಿಂದ ನಾನು ನ್ಯಾಯಾಲಯಕ್ಕೆ ಬರುತ್ತಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ಕೋರ್ಟಿನ ಒಳಗಡೆ ಬರುತ್ತಿರಲಿಲ್ಲ. 2017 ರಲ್ಲಿನಾನು ನ್ಯಾಯಾಲಯಕ್ಕೆ ಬಂದ ನಂತರ ಈ ದಾವೇಯಲ್ಲಿ ನನ್ನ ತಂದೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. 4 ನೇ ಪ್ರತಿವಾದಿಗೆ ಆದ ಕ್ರಯ ಪತ್ರ ನಾನು 2017 ರಿಂದ ಇಲ್ಲಿಯವರೆಗೆ ಪ್ರಶ್ನೆ ಮಾಡಿರುವುದಿಲ್ಲ. ಸದರಿ ಕ್ರಯ ಪತ್ರ ಪ್ರಶ್ನೆ ಮಾಡಲು ನನಗೆ ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಮೊದಲೇ ಈ ಕೇಸು ಹಾಕಿದ್ದು ಅದನ್ನು ನಾನು ನಡೆಸಿಕೊಂಡು ಬಂದಿರುತ್ತೇನೆ ಎಂದು ಹೇಳುತ್ತಾರೆ.

2007 ರಲ್ಲಿ ನಾನು ಕೇಸು ಮುಂದವರೆಸಿದ ನಂತರ ಈ ದಾವೆಯಲ್ಲಿ ಯಾವುದೇ ಬದಲಾವಣೆಗಳು ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾನು ಬದಲಾವಣೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿ ಹೆಸರಿಗೆ ಆದ ಕ್ರಯ ಪತ್ರ, ಪಹಣಿ ಪತ್ರಿಕೆ, ಮ್ಯುಟೇಶನ ದಾಖಲೆಗಳು ನ್ಯಾಯಾಲಯಕ್ಕೆ ಸೃಷ್ಠಿ ಪಡಿಸಲಾಗಿರುತ್ತವೆ ಎಂದು ನಾನು

ಹಾಜರುಪಡಿಸಿರುತ್ತೇನೆ. 4 ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರ ಆಗಿರುವ ಬಗ್ಗೆ ನಾನು ವಾದಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**4 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಕೇ. ಹೇ. ಸರಿ ಇದೆ.**

**ಸಹಿ/-**
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**